<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು</u>

<u>ಇವರ ನ್ಯಾಯಾಲಯದಲ್ಲಿ</u>

**O.S** 57/2014

ಡಿ ಡಬ್ಲು – 3

| | | |
|---|---|---|
| ಸಾಕ್ಷಿಯ ಹೆಸರು | : | ಕೆ. ನಾಗರಾಜು |
| ತಂದೆ ಹೆಸರು | : | ಕರಿಯಪ್ಪ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಎ ವಿ ಕೊಟ್ಟಿಗೆ ಹಿರಿಯೂರು |

<u>ಸಾಕ್ಷಿಯನ್ನು ದಿಃ20.03.2025 ರಂದು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು.</u>

**<u>ಮುಖ್ಯ ವಿಚಾರಣೆ 4 ನೇ ಪ್ರತಿವಾದಿಗಳ ಪರ ಶ್ರೀ ಜಿ ಸಿ ಪಿ ವಕೀಲರಿಂದಃ</u>**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ. ಸಾಕ್ಷಿಗೆ ವಿಲ್ ನಾಮೆ ತೋರಿಸಿದ್ದು ವಿಲ್ ನಾಮೆಯಲ್ಲಿರುವ ನರಸಿಂಹಪ್ಪನವರ ಸಹಿ ಮತ್ತು ತನ್ನ ಸಹಿ ನೋಡಿ ಗುರುತಿಸಿದ್ದು ಸಾಕ್ಷಿದಾರರು ವಿಲ್ ನಾಮೆಯಲ್ಲಿ ಅಟೆಸ್ಟಿಂಗ್ ವಿಟ್ನೆಸ್ ಆಗಿದ್ದರಿಂದ ವಿಲ್ ನಾಮೆಯನ್ನು ನಿಡಿ–5 ಎಂದು ಅದರಲ್ಲಿರುವ ನರಸಿಂಹಪ್ಪನವರ ಸಹಿಯನ್ನು ನಿಡಿ–5(ಎ) ರಿಂದ 5(ಜಿ) ಎಂದು ಸಾಕ್ಷಿದಾರರ ಸಹಿಯನ್ನು ನಿಡಿ–5(ಎಚ್) ಎಂದು ಗುರುತಿಸಲಾಯಿತು. ನಿಡಿ–5 ಕ್ಕೆ ಸಾಕ್ಷಿ ಲಿಂಗರಾಜು ರವರು ಸಹ ಸಹಿ ಮಾಡಿರುತ್ತಾರೆ.

**ಪಾಟೀ ಸವಾಲಿಗೆ ವಾದಿಗಳ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಹಿರಿಯೂರು